**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಯಾದಗಿರಿ.**

**<u>ಸಿ.ಸಿ ನಂಃ  44/ 2017</u>**

| | | |
|---|---|---|
| **ಸಾಕ್ಷಿಯ ಹೆಸರುಃ** | **ಶ್ರೀ ರಂಗಮ್ಮ** | **ಪ್ರಾಸಾಃ 10** |
| **ಗಂಡನ ಹೆಸರುಃ** | **ನಾಗರಾಜ್** | **ಚಾಸಾಃ 11** |
| **ವಯಸ್ಸುಃ** | **35 ವರ್ಷ** | **ದಿಃ 24-09-2025** |
| **ಉದ್ಯೋಗಃ** | **ಖಾಸಗಿ ಶಿಕ್ಷ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಮಾನಸಗಲ್ ಗ್ರಾಮ** | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ಚಾಸಾಃ 1 ರವರು ನನ್ನ ತಂಗಿಯಾಗಿರತ್ತಾರೆ. ಚಾಸಾಃ 6 ನನ್ನ ತಂದೆ ಹಾಗೂ ಚಾಸಾಃ 7 ನನ್ನ ತಾಯಿ ಆಗಿರುತ್ತಾರೆ. ನನಗೆ ಚಾಸಾಃ 8 ರಿಂದ 10 ಹಾಗೂ 12 ರಿಂದ 26 ರವರ ಪರಿಚಯ ಇದೆ.

ನನ್ನ ತಂದೆ-ತಾಯಿಗೆ ನಾವು ಮೂರು ಜನ ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳಿದ್ದೇವೆ. ಚಾಸಾಃ 1 ರವರನ್ನು 1ನೇ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದೆವು ಹಾಗೂ ಮದುವೆ ಸಮಯದಲ್ಲಿ ರೂ.2 ಲಕ್ಷ ನಗದು ಹಣ ಹಾಗೂ ಎರಡುವರೆ ತೊಲೆ ಚಿನ್ನಾಭರಣ ನೀಡಿದ್ದೆವು. ಕೋಟಗೇರಾ ಗ್ರಾಮದ ವೆಂಕಟೇಶ್ವರ ದೇವಸ್ಥಾನದಲ್ಲಿ ಅವರ ಮದುವೆ ಆಗಿರುತ್ತದೆ. ಮದುವೆಯಾದ ನಂತರ ಎರಡು ವರ್ಷಗಳ ವರೆಗೆ ಅವರುಗಳು ಅನ್ಯೂನ್ಯವಾಗಿದ್ದು ಅವರಿಗೆ ಒಬ್ಬ ಮಗಳು ಜನಿಸಿರುತ್ತಾಳೆ. ನಂತರ ಚಾಸಾಃ 1 ರವರ ಗಂಡ ಮತ್ತು ಆತನ ಕುಟುಂಬದವರು ಚಾಸಾಃ 1 ರವರಿಗೆ ನೀನು ತೆಳ್ಳಗಿದ್ದೀಯಾ, ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ ಮನೆಯಲ್ಲಿ ಕುಳಿತು ಉದ್ರಿ ಊಟ ಮಾಡುತಿಯಾ ಎಂದು ಕಿರುಕುಳ ನೀಡಿರುತ್ತಾರೆ. ಚಾಸಾಃ 1 ರವರ ಗಂಡ ಮತ್ತು ಆತನ ಕುಟುಂಬದವರು ರೂ.3 ಲಕ್ಷ ವರದಕ್ಷಣೆ ತರುವಂತೆ ತಮಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಚಾಸಾಃ 1 ರವರು ನನಗೆ ಆಗಾಗ ಕರೆ ಮಾಡಿ ತಿಳಿಸುತ್ತಿದ್ದರು. ನನ್ನ ತಂದೆ ತಾಯಿ ಚಾಸಾಃ 1 ರವರಿಗೆ ಗಂಡನ ಮನೆಯಲ್ಲಿಯೇ ಇರಬೇಕು ಎಂದು ಸಮದಾನ ಹೇಳುತ್ತಿದ್ದರು. ನನ್ನ ತಂದೆ-ತಾಯಿ

1ನೇ ಆರೋಪಿ ಹಾಗೂ ಆತನ ತಾಯಿಗೂ ಸಹ ಆಗಾಗ ಬುದ್ದಿವಾದ ಹೇಳಿ ಬರುತ್ತಿದ್ದರು. ಆದರೆ 1ನೇ ಆರೋಪಿ 2ನೇ ಮದುವೆ ಮಾಡಿಕೊಂಡಿರುತ್ತಾನೆ. 1ನೇ ಆರೋಪಿ ಜೇವರ್ಗಿ ನ್ಯಾಯಾಲಯದಲ್ಲಿ ವಿವಾಹ ನೊಂದಣಿ ಮಾಡಿಕೊಂಡಿದ್ದಾನೆ. ನಂತರ 1 ರಿಂದ 3ನೇ ಆರೋಪಿತರು ಚಾಸಾಃ 1 ರವರಿಗೆ ದೈಹಿಕ ಕಿರುಕುಳ ನೀಡಿ ತವರು ಮನೆಗೆ ಕಳುಹಿಸಿದ್ದಾರೆ. ನಂತರ ಚಾಸಾಃ 1 ರವರು ದೂರು ನೀಡಿರುತ್ತಾರೆ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಡಿ.ವಿ ವಕೀಲರಿಂದಃ</u>**

ನನ್ನ ತಂದೆ ಕೂಲಿ ಕೆಲಸಗಾರರಾಗಿರುತ್ತಾರೆ. ಚಾಸಾಃ 1 ರವರು ಪದವೀದರೆ ಆಗಿರುತ್ತಾಳೆ ಎಂದರೆ ಸರಿ. ಚಾಸಾಃ 1 ರವರು ಯಾದಗಿರಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾಳೆ ಎಂದರೆ ಸರಿ. 1ನೇ ಆರೋಪಿಯೇ ಚಾಸಾಃ 1 ರವರನ್ನು ಯಾದಗಿರಿಯಲ್ಲಿ ಓದಿಸಿರುತ್ತಾರೆ ಎಂದರೆ ಸರಿ. 1ನೇ ಆರೋಪಿಯ ಮನೆಯಲ್ಲಿ ಆತನ ತಾಯಿ ಹಾಗೂ ಇಬ್ಬರು ಸಹೋದರರು ಸಹ ಇರುತ್ತಾರೆ. 1ನೇ ಆರೋಪಿಯ ಮನೆಯ ಅಕ್ಕ-ಪಕ್ಕದಲ್ಲಿ ಶರಣಪ್ಪ, ರಾಮಣ್ಣ ಮತ್ತು ಲಕ್ಷ್ಮಿ ಎಂಬುವವರು ಮನೆಗಳು ಇದ್ದಾವೆ. ಅವರ ಮನೆಯ ಪಕ್ಕ ಬೇರೆಯಾರ ಮನೆಗಳು ಇದ್ದಾವೆ ಎಂದು ನನಗೆ ಗೊತ್ತಿಲ್ಲ.

2. ನಾನು PUC ವರೆಗೆ ಓದಿದ್ದೇನೆ. ನಿಮಗೆ ಸಿದ್ದಲಿಂಗಪ್ಪ ಸಿಂದಗಿ ಎನ್ನುವವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ವರದಕ್ಷಣೆ ಮಾತು-ಕತೆ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಚಾಸಾಃ 6 ರವರು ಸೋಮಯ್ಯ ಪೂಜಾರಿ ಹಾಗೂ ಶೇಷಪ್ಪ ಎಂಬುವವರಿಂದ ಹಣ ಸಾಲ ಪಡೆದು 1ನೇ ಆರೋಪಿಗೆ ವರದಕ್ಷಣೆ ನೀಡಿದ್ದರು. 1ನೇ ಆರೋಪಿ 2ನೇ ಮದುವೆ ಮಾಡಿಕೊಂಡಿರುವುದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಚಾಸಾಃ 1 ರವರು ತಮಗೆ ಆರೋಪಿತರು 3 ಲಕ್ಷ ವರದಕ್ಷಣೆ ತರುವಂತೆ ಕಿರುಕುಳ ನೀಡುತ್ತಿದ್ದರು ಎಂಬ ವಿಷಯವನ್ನು ನನಗೆ ಫೋನ್ ಮಾಡಿ ತಿಳಿಸಿದ್ದರು ಎಂಬುದು ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾಃ 1 ರವರಿಗೆ ದೈಹಿಕ ಕಿರುಕುಳ ನೀಡಿ ತವರು ಮನೆಗೆ ಕಳುಹಿಸಿದ್ದಾರೆ ಎಂಬ ವಿಷಯವೂ ಸಹ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

3. ಆರೋಪಿಗೆ ಚಿನ್ನಾಭರಣ ಎಂದರೆ ಯಾವ ಆಭರಣ ನೀಡಿದ್ದೀರಿ ಎಂಬ ಬಗ್ಗೆ ನಿಮ್ಮ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಎರಡುವರೆ ತೊಲೆಯ ಉಂಗುರ ನೀಡಿದ್ದೆವು ಎಂದು ನುಡಿಯುತ್ತಾರೆ. ಉಂಗುರ ನೀಡಿದ್ದೆವು ಎಂಬ ವಿಷಯವೂ ಸಹ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಮದುವೆ ಸಮಯದಲ್ಲಿ ನಗದು ಹಣ ಹಾಗೂ ಚಿನ್ನಾಭರಣ ವರದಕ್ಷಣೆಯಾಗಿ ನೀಡಿದ್ದೆವು ಹಾಗೂ ಎರಡು ವರ್ಷಗಳ ನಂತರ ಅವರು ಚಾಸಾಃ 1 ರವರಿಗೆ ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಚಾಸಾಃ 1 ರವರಿಗೆ 3 ಲಕ್ಷ ವರದಕ್ಷಣೆ ತರುವಂತೆ ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಆಗಾಗ 1 ಮತ್ತು 2ನೇ ಅರೋಪಿತರಿಗೆ ಬುದ್ದಿವಾದ ಹೇಳಿ ಬರುತ್ತಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಚಾಸಾಃ 1 ರವರಿಗೆ ದೈಹಿಕ ಕಿರುಕುಳ ನೀಡಿ ತವರು ಮನೆಗೆ ಕಳುಹಿಸಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪದವಿ ವಿದ್ಯಾಭ್ಯಾಸ ಮುಗಿಸಿದ ನಂತರ ಚಾಸಾಃ 1 ರವರೇ 1ನೇ ಆರೋಪಿಯೊಂದಿಗೆ ಸರಿಯಾಗಿ ವೈವಾಹಿಕ ಜೀವನ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ 1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
ಯಾದಗಿರಿ